**ಕರ್ನಾಟಕ ಲೋಕಾಯುಕ್ತ**

**ಕಂಪ್ಲೆಂಟ್/ಉಪಲೋಕ್/ಬಿಸಿಡಿ/1178/2021** ಬಹುಮಹಡಿಗಳ ಕಟ್ಟಡ,
**ಪಿಓ.ಎ.ಆರ್.ಇ-5 (ಮಂಡನಾಧಿಕಾರಿಗಳ ಶಾಖೆ)** ಡಾ. ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ :24/02/2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: ಶ್ರೀ. ಕೃಷ್ಣೇಗೌಡ ಬಿನ್ ಅಂಕೇಗೌಡ, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ), ಅಂಜನಾಪುರ ಉಪವಲಯ ಬಿ.ಬಿ.ಎಂ.ಪಿ, ಬೆಂಗಳೂರು. ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ಬೆಂಗಳೂರು ನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಕೃಷ್ಣೇಗೌಡ ಬಿನ್ ಅಂಕೇಗೌಡ, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ), ಅಂಜನಾಪುರ ಉಪವಲಯ ಬಿ.ಬಿ.ಎಂ.ಪಿ, ಬೆಂಗಳೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಇವರ ವಿರುದ್ದ **ಶ್ರೀ. ಪ್ರದೀಪ್ ಹೆಚ್.ಆರ್. ಬಿನ್ ರಮೇಶ್, # ನಂ.153, ಚೌಡೇಶ್ವರಿ ನಿಲಯ, 6ನೇ ಕ್ರಾಸ್, ಜನತಾ ಕಲೋನಿ, ಹುಳಿಮಾವು, ಬೆಂಗಳೂರು-76** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ಇವರು ದೂರು ಸಲ್ಲಿಸಿದ್ದು, ದೂರಿನಲ್ಲಿ ದೂರುದಾರರ ಮಾವನವರ ಮಾಲಿಕತ್ವದ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೊತ್ತನೂರು ಗ್ರಾಮ, ಖಾತೆ ನಂ.2337 ಕ್ಷೇತ್ರ 20 ಗುಂಟೆ ಹಾಗೂ ಹುಳಿಮಾವು ಗ್ರಾಮ ಖಾತಾ ನಂ.1307 ಕ್ಷೇತ್ರ 32 ಗುಂಟೆ ಇವುಗಳನ್ನು ಒಟ್ಟುಗೂಡಿಸುವ ಸಲುವಾಗಿ ಎದುರುದಾರರು 20,000 ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ಬೆಂಗಳೂರು ನಗರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 03/2016 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 20,000/-ರೂ. ಲಂಚ ಪಡೆದು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ

ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಪ್ರದೀಪ್ ಹೆಚ್.ಆರ್. ಬಿನ್ ರಮೇಶ್, # ನಂ.153, ಚೌಡೇಶ್ವರಿ ನಿಲಯ, 6ನೇ ಕ್ರಾಸ್, ಜನತಾ ಕಲೋನಿ, ಹುಳಿಮಾವು, ಬೆಂಗಳೂರು-76** ಇವರು ತಮ್ಮ ಮಾವನವರ ಮಾಲಿಕತ್ವದಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕೊತ್ತನೂರು ಗ್ರಾಮ, ಗೊಟ್ಟಿಗೆರೆ ವಾರ್ಡ‌ನ ಖಾತಾ ಸಂಖ್ಯೆ 2337 ಭೂಪರಿವರ್ತಿತ ಸರ್ವೆ ನಂ.177/2 ರಲ್ಲಿ 20 ಗುಂಟೆ ಜಮೀನು ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮ, ವಾರ್ಡ ನಂ.193 ಗೆ ಒಳಪಟ್ಟ ಖಾತಾ ಸಂಖ್ಯೆ 1307 ಭೂ ಪರಿವರ್ತಿತ ಸರ್ವೆ ನಂ.69/1 ರಲ್ಲಿ 32 ಗುಂಟೆ ಈ ಎರಡೂ ಸ್ವತ್ತುಗಳನ್ನು ಒಗ್ಗೂಡಿಸಿ ಜಂಟಿಖಾತಾ ಮಾಡಿಕೊಡುವ ಸಲುವಾಗಿ ದಿನಾಂಕ:30/03/2016 ರಂದು ಬಿ.ಬಿ.ಎಂ.ಪಿ ಅರಕೆರೆ ವಾರ್ಡ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಇದರ ಉಸ್ತುವಾರಿಯನ್ನು ನೋಡಿಕೊಳ್ಳಲು ಶ್ರೀ. ಮಾರುತಿಕುಮಾರ್ ರವರು ದೂರುದಾರರಿಗೆ ದಿನಾಂಕ: 27/02/2016 ರಂದು ಜಿ.ಪಿ.ಎ. ಮೂಲಕ ನೀಡಿರುತ್ತಾರೆ. ಈ ವಿಚಾರವಾಗಿ ದಿ: 07/05/2016ರಂದು ಎದುರುದಾರರನ್ನು ಭೇಟಿಯಾದಾಗ ಎದುರುದಾರರು 20,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದು ಅದರ ಆಡಿಯೋ ಮತ್ತು ವೀಡಿಯೋವನ್ನು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:11/05/2016ರಂದು ಬೆಂಗಳೂರು ನಗರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ. 03/2016 ರಲ್ಲಿ ಕಲಂ 7, 13(1)(ಡಿ) ರೆ/ವಿ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಎಸ್. ರಾಚಯ್ಯ (ನೆರಳುಸಾಕ್ಷಿ), 2) ಪ್ರತಾಪ್ ಜಿ. ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನಲ್ಲಿದ್ದ ಮೆಮೊರಿ ಕಾರ್ಡನ್ನು ಹಾಜರುಪಡಿಸಿರುತ್ತಾರೆ. ಮೆಮೊರಿ ಕಾರ್ಡಿನಲ್ಲಿದ್ದ ಸಂಭಾಷಣೆ ಹಾಗೂ ಚಿತ್ರವನ್ನು ಪಂಚರು ನೋಡಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 20,000/-

(1000X20) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಹೇಳಿದಂತೆ ಟೈಪ್ ಮಾಡಲಾಗಿರುತ್ತದೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಪ್ರತಾಪ್ ಜಿ. ರವರ ಮೂಲಕ ದೂರುದಾರರ ಪ್ಯಾಂಟ್‌ನ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪ್ರತಾಪ್ ಜಿ. ಇವರ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರನ ವೈಶಿಷ್ಯತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಎಸ್. ರಾಚಯ್ಯ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 11-05-2016 ರಂದು ಮಧ್ಯಾಹ್ನ 2.15ರಿಂದ 3 ಘಂಟೆಯವರೆಗೆ ಬೆಂಗಳೂರು ನಗರ ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ದೂರುದಾರರು ಹಾಗೂ ಪಂಚರು ಗೊಟ್ಟಿಗೆರೆ ವಾರ್ಡ್ ನಂ.194, ಸಹಾಯಕ ಕಂದಾಯ ಅಧಿಕಾರಿ ಇವರ ಕಛೇರಿ ಹತ್ತಿರ ಬಂದಿದ್ದು, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಕಾರ್ಯಾಲಯದ ಆವರಣದಲ್ಲಿ ಸಂಶಯ ಬರದಂತೆ ನಿಂತಿದ್ದು, ದೂರುದಾರರನ್ನು ಹಾಗೂ ನೆರಳು ಸಾಕ್ಷಿ ಎಸ್. ರಾಚಯ್ಯ ಇವರನ್ನು ಕಛೇರಿಯ ಒಳಗೆ ಕಳುಹಿಸಿದ್ದು, ಎದುರುದಾರರು, ದೂರುದಾರರು ಹಾಗೂ ಮತ್ತೊಬ್ಬ ವ್ಯಕ್ತಿ ಕಛೇರಿಯಿಂದ ಹೊರಗಡೆ ಬಂದು ಕಛೇರಿಯ ಪಕ್ಕದಲ್ಲಿರುವ ಉಪಹಾರ ಭವನದ ಕಡೆಗೆ ಹೋಗಿದ್ದು ಎದುರುದಾರರು ಎಡಗೈನಿಂದ ಹಣ ಪಡೆದು ತಮ್ಮ ಎಡಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ತನಿಖಾಧಿಕಾರಿಗೆ ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಿದ್ದು, ತಕ್ಷಣ ತನಿಖಾಧಿಕಾರಿಗಳು ಎದುರುದಾರರು ಇದ್ದ ಉಪಹಾರ ಭವನಕ್ಕೆ ಬಂದಿದ್ದು, ಸದರಿ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದರಿಂದ, ಮುಂದಿನ ಪ್ರಕ್ರಿಯೆಗಳನ್ನು ಜರುಗಿಸಲು ಕಷ್ಟವಾದ್ದರಿಂದ, ಎ.ಆರ್.ಓ. ಕಛೇರಿಯಲ್ಲಿ ಮುಂದಿನ ಕ್ರಮ ಜರುಗಿಸಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ

ಎದುರುದಾರರಿಗೆ ತಿಳಿಸಿರುತ್ತಾರೆ. ಹಣದ ಬಗ್ಗೆ ವಿಚಾರಿಸಲಾಗಿ ಎದುರುದಾರರು ತಮ್ಮ ಪ್ಯಾಂಟ್‌ನ ಎಡಜೇಬಿನಲ್ಲಿ ಹಣವನ್ನು ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಅದನ್ನು ನೆರಳುಸಾಕ್ಷಿ ರಾಚಯ್ಯನವರು ತೆಗೆದು ಹಾಜರುಪಡಿಸಿರುತ್ತಾರೆ. ಪಂಚರು ನೋಟುಗಳ ನಂಬರುಗಳನ್ನು ತಾವು ಈ ಮೊದಲು ದಾಖಲಿಸಿಕೊಂಡ ನಂಬರುಗಳೊಂದಿಗೆ ತಾಳೆ ಮಾಡಿ ಖಾತರಿ ಪಡಿಸಿಕೊಂಡ ಮೇರೆಗೆ ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರ ಎಡ ಕೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣವನ್ನು ಎದುರುದಾರರು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿದ್ದರಿಂದ, ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಜೇಬನ್ನು ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ಪ್ಯಾಂಟನ್ನು ಕೂಡ ಅಮಾನತ್ತು ಪಡಿಸಿಕೊಂಡಿದ್ದಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಮುಂದುವರೆದು ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು, ಹಾಜರಾತಿ ಪುಸ್ತಕ, ಟಪಾಲು ಪುಸ್ತಕಗಳನ್ನು ಎ.ಆರ್.ಓ ಅಂಜನಾಪುರ ಇವರಿಂದ ದೃಢೀಕರಿಸಿ ಪ್ರತಿಗಳನ್ನು ಪಡೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ:11/05/2016ರಂದು ಸಾಯಂಕಾಲ 6.15 ರಿಂದ ರಾತ್ರಿ 9 ಗಂಟೆಯವರೆಗೆ ಗೊಟ್ಟಿಗೆರೆ ಎ.ಆರ್.ಓ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದರುದಾರರ ಎಡಗೈತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಪ್ಯಾಂಟ್ ಜೇಬನ್ನು ತೊಳೆದ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಮೆಮೊರಿ ಕಾರ್ಡಿನಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿಯವರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ಪಿ.ಓ.ಎ.ಆರ್.ಇ–5 ಇವರಿಗೆ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಹೇಳಿದಂತೆ ಶಿಫಾರಸ್ಸು ಮಾಡಲು ಅಧಿಕಾರವಿರುವುದಿಲ್ಲ. ಎ.ಸಿ.ಬಿ ಪೊಲೀಸ್‌ರು ಈಗಾಗಲೇ ತನಿಖೆ ಮಾಡಿದ್ದರಿಂದ ಲೋಕಾಯುಕ್ತ ಕಾಯ್ದೆ ಅಡಿಯಲ್ಲಿ ಪರಿವೀಕ್ಷಣಾ ಟಿಪ್ಪಣಿ ಕಳುಹಿಸಲು ಮತ್ತು ಶಿಫಾರಸ್ಸು ಮಾಡಲು ಅಧಿಕಾರವಿರುವುದಿಲ್ಲ. ನನ್ನ ಮೇಲೆ ಜಾರಿ ಮಾಡಿದ ಪರಿವೀಕ್ಷಣಾ ಟಿಪ್ಪಣಿಯು ಕಾನೂನು ಬಾಹಿರವಾಗಿರುತ್ತದೆ. ನಾನು ಲಂಚಕ್ಕೆ ಬೇಡಿಕೆ ಇಟ್ಟಿರುತ್ತೇನೆ ಮತ್ತು ಹಣ ಸ್ವೀಕರಿಸಿರುತ್ತೇನೆ ಎಂಬುದು ಸತ್ಯಕ್ಕೆ ದೂರವಾಗಿರುತ್ತದೆ. ಘಟನೆ ನಡೆದು 4 ವರ್ಷಗಳಾಗಿರುವುದರಿಂದ ಕಾಲಮಿತಿಯ ಬಾದಾ ಇರುತ್ತದೆ. ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಆಪಾದನೆಗಳು ಸುಳ್ಳು ಹಾಗೂ ಆಧಾರ ರಹಿತವಾಗಿರುತ್ತದೆ. ಎ.ಸಿ.ಬಿ ಪೊಲೀಸ್‌ರು ಅಂಕಿ ಸಂಖ್ಯೆಗೋಸ್ಕರ ಪ್ರಕರಣ ದಾಖಲಿಸಿ, ಸುಳ್ಳು ಟ್ರ್ಯಾಪ್ ಪಂಚನಾಮೆಯನ್ನು ಸೃಷ್ಟಿಸಿರುತ್ತಾರೆ. ದೂರುದಾರರ ಯಾವುದೇ ಕೆಲಸವು ತನ್ನ ಹತ್ತಿರ ಬಾಕಿಯಿರಲಿಲ್ಲ ಮತ್ತು ನನ್ನಿಂದ ಯಾವುದೇ ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಯಾವುದೇ ತಪ್ಪು ಮಾಡದೇ ಇದ್ದರು ನನ್ನನ್ನು ಬಲಿ ಪಶು ಮಾಡಲಾಗಿದೆ ಮತ್ತು ನಿಜ ಸಂಗತಿಯನ್ನು ಮುಚ್ಚಿಡಲಾಗಿದೆ. ತಾನು ತೃಪ್ತಿಕರವಾದ ವಿವರಣೆಯನ್ನು ನೀಡಿದರೂ ಸಹ ಟ್ರ್ಯಾಪ್ ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತಾರೆ. ಮಾನ್ಯ ಲೋಕಾಯುಕ್ತರಿಗೆ ತನಿಖೆ ಕೈಗೊಳ್ಳಲು ಯಾವುದೇ ಅಧಿಕಾರ ಇರುವುದಿಲ್ಲ. ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿರುವುದು ಉಚ್ಛ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳಿಗೆ ವಿರುದ್ಧವಾಗಿರುತ್ತದೆ. ವಿಚಾರಣೆ ಮಾಡುವುದು ಬಿಡುವುದು ಇಲಾಖೆಗೆ ಬಿಟ್ಟ ವಿಷಯವಾಗಿರುತ್ತದೆ. ನಾನು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದು, ಯಾವುದೇ ದುರ್ನಡತೆ ಎಸಗಿರುವುದಿಲ್ಲ. ಈ ಮೇಲ್ಕಂಡ ಕಾರಣಗಳಿಂದಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಧಿಕಾರವಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ

ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಎದುರುದಾರರು ದಿ: 31-01-2020 ರಂದು ನಿವೃತ್ತಿ ಹೊಂದಿರುವುದರಿಂದ, ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್.ಆರ್ ಕಲಂ 214 (2)(ಬಿ) (i) ಅನ್ವಯ ಅನುಮತಿಸಿ, ಸಿ.ಸಿ.ಎ. ನಿಯಮ 14 (ಎ) ಅನ್ವಯ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

24/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**